ಅ.ದಾ. ಸಂಃ 65/2014 ಪಿ.ಡಬ್ಲ್ಯು: 01

ದಿಃ 07/06/2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ. ಐ ಎನ್ ಎನ್ ವಾದಿ ಪರ ವಕೀಲರಿಂದಃ

ನನ್ನ ಸಾಕ್ಷಿ ಹೇಳಿಕೆಯ ಭಾಗವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ. ಅದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ದಿನಾಂಕ 07/09/1998 ರ ಹಳೆ ವಾಸನ ಮನೆಯ ಕ್ರಯ ಪತ್ರದ ಅಸಲಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

ಪುರ ಸಭೆ ಕಾರ್ಯಾಲಯ, ಗೌರೀಬಿದನೂರು ರವರಿಂದ ಪಡೆದಿರುವ ಆಸ್ತಿ ತೆರಿಗೆ ರಿಜಿಸ್ಟರ್ ನ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

ದಿನಾಂಕ 03/06/2013 ರ ತೆರಿಗೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

2013-14 ನೇ ಸಾಲಿನ ಗೌರೀಬಿದನೂರು ಪುರಸಭೆಯಿಂದ ಪಡೆದಿರುವ ಕಟ್ಟಡದ ಆಸ್ತಿ ತೆರಿಗೆ ಸ್ವಯಂ ನಿರ್ಧರಣ ಪಟ್ಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು.

ಎರಡು ವಿದ್ಯುತ್ ಬಿಲ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-5 ಮತ್ತು ನಿಪಿ-6 ಎಂದು ಗುರುತಿಸಲಾಯಿತು.

ನನ್ನ ಮುಖ್ಯ ವಿಚಾರಣಾ ಸಾಕ್ಷ್ಯ ಹಾಗೂ ದಾಸ್ತಾಮೇಗಳನ್ನು ಪರಿಶೀಲಿಸಿ ನನ್ನ ದಾವೆಯನ್ನು ಪುರಸ್ಕರಿಸಿ ನನ್ನ ದಾವೆಯಲ್ಲಿ ಕೋರಿರುವಂತೆ ಡಿಕ್ರಿ ಮಾಡಬೇಕೆಂದು ಕೋರುತ್ತೇನೆ.

(ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರು ಗೈರುಹಾಜರಿರುವ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು